# ಸಾಮರಸ್ಯದ ಸಂಕೇತ ಎರಡನೆಯ ಇಬ್ರಾಹಿಮ ಆದಿಲ್‌ಶಾಹಿ ವಿರಚಿತ: `ಕಿತಾಬ-ಇ-ನವರಸ'

**ಬಸೀರಾಬಾನು ನಿಡಗುಂದಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಜಯಪುರ.

**DOI: https://doi.org/10.5281/zenodo.17487078**

## ABSTRACT:

ಭಾರತದ ಮಧ್ಯಯುಗದ ಇತಿಹಾಸದಲ್ಲಿ ಮೊಘಲ್ ಚಕ್ರವರ್ತಿ ಅಕ್ಬರ್ ಮತ್ತು ಮರಾಠಾ ಚಕ್ರವರ್ತಿ ಶಿವಾಜಿ ಅವರಂತೆ ಧಾರ್ಮಿಕ ಸಹಿಷ್ಣುತೆ ಮೆರೆದ ವಿಜಯಪುರದ ಆದಿಲ್‌ಶಾಹಿ ಅರಸ ಎರಡನೆಯ ಇಬ್ರಾಹಿಮ ಆದಿಲ್‌ಶಾಹಿಯ ಬಗ್ಗೆ ಈ ಲೇಖನವು ವಿಶ್ಲೇಷಿಸುತ್ತದೆ. ಇಸ್ಲಾಮ್ ಧರ್ಮದ ರಾಜನಾಗಿದ್ದರೂ, ಹಿಂದೂ ಸಂಸ್ಕೃತಿ ಮತ್ತು ನಂಬಿಕೆಗಳ ಮೇಲೆ ಆತನಿಗೆ ಅಪಾರ ಗೌರವವಿತ್ತು. ಆತನು ಕವಿ, ಸಂಗೀತಗಾರ ಮತ್ತು ಚಿತ್ರಕಲಾವಿದನಾಗಿದ್ದು, ತನ್ನ ಆಸ್ಥಾನದಲ್ಲಿ ಎಲ್ಲ ಧರ್ಮದವರಿಗೂ ಸ್ಥಾನ ನೀಡಿದ್ದನು. ಎರಡನೆಯ ಇಬ್ರಾಹಿಮನು ದಖಣಿ ಉರ್ದುವಿನಲ್ಲಿ ರಚಿಸಿದ 'ಕಿತಾಬ-ಇ-ನವರಸ' ಎಂಬ ಸಂಗೀತ ಗ್ರಂಥದಲ್ಲಿ ಅಲ್ಲಾ ಮತ್ತು ಪೈಗಂಬರರ ಜೊತೆಗೆ ಶಿವ, ಗಣಪತಿ ಮತ್ತು ಸರಸ್ವತಿಯರನ್ನೂ ಸ್ತುತಿಸಿದ್ದಾನೆ. ಇದು ಇಬ್ರಾಹಿಮನ ಧಾರ್ಮಿಕ ಸಾಮರಸ್ಯ ಮತ್ತು ಸಂಗೀತ ಪ್ರೇಮದ ಸಂಕೇತವಾಗಿದೆ. ಇವನಿಗೆ 'ಜಗದ್ಗುರು' ಎಂಬ ಬಿರುದು ಇತ್ತು.

## KEYWORDS:

ಕಿತಾಬ-ಇ-ನವರಸ, ಎರಡನೆಯ ಇಬ್ರಾಹಿಮ ಆದಿಲ್‌ಶಾಹಿ, ಧಾರ್ಮಿಕ ಸಹಿಷ್ಣುತೆ, ಜಗದ್ಗುರು, ವಿಜಯಪುರ.

ಸಾಮಾನ್ಯವಾಗಿ ರಾಜರ ಕಾಲಘಟ್ಟದಲ್ಲಿ ರಾಜನ ಧರ್ಮವೇ ಪ್ರಧಾನ 'ರಾಜಧರ್ಮ'ವಾಗಿರುತ್ತಿತ್ತು. ಅದನ್ನು ಎಲ್ಲರೂ ಪಾಲಿಸುವಂತೆ ಜನಗಳ ಮೇಲೆ ಹೇರುವ ಪ್ರಯತ್ನ ಕೂಡಾ ಅಷ್ಟೇ ಸಹಜವಾಗಿರುವಂತೆ ತೋರುತ್ತಿತ್ತು. ಅನ್ಯಧರ್ಮವನ್ನು ನಗಣ್ಯಗೊಳಿಸುವುದು ಸೇರಿದಂತೆ ಕೆಲವೊಮ್ಮೆ ಜನಸಾಮಾನ್ಯರು ಕಿರುಕುಳಕ್ಕೂ ಒಳಗಾಗುತ್ತಿದ್ದರು. ಈ ಕೆಲಸವನ್ನು ಅಶೋಕನಿಂದ ಅಫಜಲಖಾನ್‌ರವರೆಗಿನ ಬಹುತೇಕ ಎಲ್ಲ ಕಾಲದ ಆಡಳಿತದವರು ಮಾಡುತ್ತಲೇ ಬಂದಿರುವ ಕುರುಹುಗಳನ್ನು ಕಾಣಬಹುದು. ಇವುಗಳಿಗೆ ಅಪವಾದವೆಂಬಂತೆ ಭಾರತದ ಇತಿಹಾಸದ ಮಧ್ಯಯುಗದಲ್ಲಿ ಅಕ್ಬರ್, ಶಿವಾಜಿ ಮತ್ತು ಎರಡನೆಯ ಇಬ್ರಾಹಿಮರಂತಹ ರಾಜರು ಈ ನೆಲಮೂಲದ ಶ್ರೇಷ್ಟ ಗುಣವಾದ ಧಾರ್ಮಿಕ ಸಹಿಷ್ಣುತೆಯನ್ನು ಮೆರೆದಿದ್ದು ಅಷ್ಟೇ ಅಲ್ಲ; ಬೇರೆ ಧರ್ಮಗಳನ್ನು ಪೋಷಿಸುತ್ತ, ಭಿನ್ನ ಭಿನ್ನ ಮತ-ಪಂಥಗಳ ನಂಬಿಕೆ ಮತ್ತು ಸಾಂಸ್ಕೃತಿಕ ವಿಚಾರಧಾರೆಗಳ ಉಗಮಕ್ಕೂ

ಸಹ ಕಾರಣರಾಗಿದ್ದಾರೆ.

ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ ಬಹಮನಿ ಸಾಮ್ರಾಜ್ಯ ಸುಮಾರು 180 ವರ್ಷಗಳ ಕಾಲ ಕರ್ನಾಟಕದ ಕಲಬುರ್ಗಿ ಹಾಗೂ ಬೀದರ ನಗರಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು 18 ಬಾದಶಹರು ಆಳ್ವಿಕೆ ಮಾಡಿದರು. ಮುಂದೆ ಅರಾಜಕತೆಯಿಂದ ಬಹಮನಿ ಮನೆತನ ಒಡೆದು 'ವಿಜಯಪುರದಲ್ಲಿ ಆದಿಲ್‌ಶಾಹಿ, ಬೀದರನಲ್ಲಿ ಬರೀದಶಾಹಿ, ಗೋಲ್ಕೊಂಡ್‌ದಲ್ಲಿ ಕುತುಬ್‌ಶಾಹಿ, ಬಿರಾರ್‌ದಲ್ಲಿ ಇಮಾದಶಾಹಿ ಮತ್ತು ಅಹಮದನಗರದಲ್ಲಿ ನಿಜಾಂಶಾಹಿ' ಎಂಬ ಐದು ರಾಜಮನೆತನಗಳು ಅಸ್ತಿತ್ವಕ್ಕೆ ಬಂದವು.

ವಿಜಯಪುರದ ಬಾದಶಹರು ಶ್ರೇಷ್ಠ ಯೋಧರಲ್ಲದೆ, ಸಾಹಿತ್ಯ, ಸಂಗೀತ ಮತ್ತು ಕಲೆಗಳಲ್ಲಿ ಆಸಕ್ತಿಯುಳ್ಳವರು ಮತ್ತು ಪೋಷಕರು ಆಗಿದ್ದರು. ಒಂದನೆಯ ಅಲಿ ಆದಿಲ್‌ಶಾಹಿಗೆ ಮಕ್ಕಳಿಲ್ಲದ ಕಾರಣ, ಆತನ ಅಣ್ಣನ ಮಗ ಎರಡನೆಯ ಇಬ್ರಾಹಿಮ ಆದಿಲ್‌ಶಾಹಿ ಪಟ್ಟಕ್ಕೆ ಬಂದನು. ಬಾದಶಹನಾದ ಎರಡನೆಯ ಇಬ್ರಾಹಿಮನ ವ್ಯಕ್ತಿತ್ವ ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಭಿನ್ನವಾಗಿತ್ತು. ಎರಡನೆಯ ಇಬ್ರಾಹಿಮ ಬಾದಶಹ ಬಾಲಕನಾಗಿದ್ದಾಗ ಜೀವನ್ಮರಣದ ರೋಗದಿಂದ ಬಳಲುತ್ತಿದ್ದನು. ಬಾದಶಹನ ತಾಯಿ ನರಸಿಂಹದೇವರಲ್ಲಿ ಹರಕೆ ಹೊತ್ತಾಗ ಮಗನ ರೋಗ ಸುಧಾರಿಸಿತು ಎಂದು ಐತಿಹ್ಯ. ಬಾಲ್ಯದಿಂದಲೇ ಎರಡನೆಯ ಇಬ್ರಾಹಿಮನಿಗೆ ಹಿಂದೂ ಸಂಸ್ಕೃತಿಯ ಬಗ್ಗೆ ನಂಬಿಕೆ ಮತ್ತು ಗೌರವ ಮೂಡಿದವು. ಇಬ್ರಾಹಿಮ ಸ್ವತಃ ಕವಿಯಾಗಿದ್ದನಲ್ಲದೆ, ಸಂಗೀತಗಾರ ಮತ್ತು ಚಿತ್ರಕಲಾವಿದನೂ ಕೂಡಾ ಆಗಿದ್ದನು. ಈತನ ಆಸ್ಥಾನದಲ್ಲಿ ಸುಮಾರು 300 ಕ್ಕೂ ಹೆಚ್ಚು ಆಶುಕವಿಗಳಿದ್ದರು. ಇಬ್ರಾಹಿಮನು ಆಸ್ಥಾನದಲ್ಲಿ ಎಲ್ಲ ಧರ್ಮದವರಿಗೆ ಸ್ಥಾನಗಳನ್ನು ನೀಡಿದ್ದನು. ಶಿವಾಜಿಯ ಬಗ್ಗೆ 'ಶಿವಭಾರತ' ಎಂಬ ಗ್ರಂಥ ಬರೆದ 'ಪರಮಾನಂದ' ಕವಿ ಕೂಡಾ ಬಾದಶಹನಿಂದ ಪ್ರೋತ್ಸಾಹ ಪಡೆದಿದ್ದ. ಮರಾಠಿಯ ಸುಪ್ರಸಿದ್ಧ ಕವಿ 'ವಾಮನ ಪಂಡಿತ' ಆಸ್ಥಾನದ ಶ್ರೇಷ್ಠ ಕವಿಯಾಗಿದ್ದನು. ಮುಂದುವರೆದು ಎರಡನೆಯ ಇಬ್ರಾಹಿಮನು ತನ್ನ ನವರಸಪುರದ ಅರಮನೆಯ ಆವರಣದಲ್ಲಿ ಸರಸ್ವತಿ ಮಂದಿರವನ್ನು ಕಟ್ಟಿಸಿದ್ದನು. ಅದುವೇ ಇಂದಿನ ತೊರವಿಯಲ್ಲಿರುವ 'ನರಸಿಂಹಸ್ವಾಮಿ' ದೇವಾಲಯ. ಮಹಿಪತಿದಾಸರ ಪ್ರವಚನ ಕೇಳಿ, ಆಕರ್ಷಿತನಾಗಿ ಅವರನ್ನು ತನ್ನ ಆಸ್ಥಾನದ 'ಖಜಾಂದಾರ'(ರಾಜಗುರು)ರನ್ನಾಗಿ ನೇಮಿಸಿಕೊಂಡನು. ಬಾದಶಹನು ತನ್ನ ಗ್ರಂಥ 'ಕಿತಾಬ–ಇ–ನವರಸ'ದಲ್ಲಿ ಅಲ್ಲಾ, ಪೈಗಂಬರ ಮತ್ತು ಕಲಬುರ್ಗಿಯ 'ಬಂದೇ ನವಾಜ'ರನ್ನು ಸ್ತುತಿಸಿದಂತೆ, ಹಿಂದೂ ದೇವ ದೇವತೆಗಳಾದ ಶಿವ, ಶಾರದೆ, ಗಣಪತಿ ಮತ್ತು ಸರಸ್ವತಿಯರನ್ನೂ ಸ್ತುತಿಸಿದ್ದಾನೆ. ಆತನ ಪ್ರಕಾರ;

**`ಭಾಕಾ ನ್ಯಾರೀ ನ್ಯಾರೀ ಭಾವ ಏಕ**

**ಕಹಾ ತುರುಕ ಕಹಾ ಬರಾಹಮನ್’**

ಭಾಷೆ ಬೇರೆ ಬೇರೆಯಾದರೇನು? ಆತನು ಮುಸ್ಲಿಂ(ತುರುಕ)ನಾಗಲಿ, ಬ್ರಾಹ್ಮಣನಾಗಿರಲಿ ಭಾವ ಒಂದೇ ಎಂದು ಹೇಳುವನು. ಹಾಗೆಯೇ ಇದುವೇ ಆತನ ಸಂದೇಶವೂ ಆಗಿತ್ತು.

ಸಂಗೀತದಲ್ಲಿರುವ ಒಂಭತ್ತು(ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತ) ರಸಗಳೆಂದರೆ ಇಬ್ರಾಹಿಮನಿಗೆ ಪಂಚಪ್ರಾಣವಾದ್ದವು. ಈ ಹಿನ್ನಲೆಯಲ್ಲಿಯೇ ಆತನೇ ‘ಕಿತಾಬೆ-ನವರಸ’ ಅಥವಾ ‘ಕಿತಾಬ-ಇ-ನವರಸ’ ರಚಿಸಿದ. ಇದು ದಖಣಿ ಉರ್ದುವಿನಲ್ಲಿರುವ ಗೀತೆಗಳ ಸಂಕಲನವಾಗಿದೆ. ಈ ಕಾವ್ಯದಲ್ಲಿ ಒಟ್ಟು 59 ಗೀತೆಗಳು ಮತ್ತು 17 ದೋಹಾ(ದ್ವಿಪದಿ) ಗಳನ್ನು ಕಾಣಬಹುದು. ಇದಲ್ಲದೆ 14 ರಾಗಗಳ ಜೊತೆಗೆ ‘ಹಜೀಜ, ಬರಾಡೀ ಮತ್ತು ನೌರೋಜ’ ಎಂಬ ಮೂರು ಹೊಸ ರಾಗಗಳ ಬಗ್ಗೆ ಸಹ ಹೇಳುವನು. ಈ ಕಾವ್ಯವು ಆರಂಭದಲ್ಲಿ ಸರಸ್ವತಿಯ ಸ್ತುತಿಯಿಂದ ಪ್ರಾರಂಭವಾಗುವುದು ವಿಶೇಷವಾಗಿದೆ;

**‵ನೌರಸ ಸೂರ ಜುಗ ಜಗಜೋಶಿ ಆಣು ಸರೋಗುನಿ**
**ಯೂಸತ್ ಸರಸುತೀ ಮಾತಾ ಇಬ್ರಾಹಿಮ ಪರಸಾದ ಭಈ ದೂನೀ’**

‘ಹೇ ತಾಯಿ ಸರಸ್ವತಿ, ಇಬ್ರಾಹಿಮನ ಮೇಲೆ ನಿನ್ನ ಕೃಪೆ ಇದೆಯಾದ್ದರಿಂದ, ನಿನ್ನ ಅನುಗ್ರಹದಿಂದ ಆತನ ‘ನವರಸ’ ಕಾವ್ಯವು ಜಗತ್ತಿನಲ್ಲಿ ಬಹುಕಾಲ ಬಾಳುತ್ತದೆ’ ಎಂದು ತನ್ನ ‘ಕಿತಾಬೆ-ನವರಸ’ ಕೃತಿಯನ್ನು ಪ್ರಾರಂಭಿಸುತ್ತಾನೆ. ತನ್ನ ಅರಮನೆಯಲ್ಲಿದ್ದ ವಿದ್ವಾಂಸರೊಂದಿಗಿನ ಒಡನಾಟದಿಂದ ಆದಿಲ್‌ಶಹನಿಗೆ ಸಂಗೀತದ ನವರಸಗಳ ಬಗ್ಗೆ ಆಸಕ್ತಿ ಉಂಟಾಯಿತು. ಪ್ರತಿ ತಿಂಗಳ ಮೊದಲ ಗುರುವಾರ ತನ್ನ ರಾಜಧಾನಿಯಲ್ಲಿ ‘ಈದ-ಏ-ನೌರಸ’ ಎಂಬ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದನು. ನವರಸಪುರಕ್ಕೆ ಬೇರೆ ಬೇರೆ ಕಡೆಯಿಂದ ಸಂಗೀತಗಾರರು, ವಾದ್ಯ ಮೇಳದವರು, ನೃತ್ಯ ಪ್ರವೀಣರು ಬಂದು ಕಾರ್ಯಕ್ರಮಗಳನ್ನು ಕೊಡುತ್ತಿದ್ದರು. ಇದಕ್ಕಾಗಿಯೇ ವಿಜಯಪುರದಲ್ಲಿ ‘ನವರಸಪುರ’ ಎಂಬ ಸಂಗೀತ ನಗರವನ್ನು ಸಹ ನಿರ್ಮಿಸಿದ್ದನು. ಇಂದಿಗೂ ನವರಸಪುರದ ಅಳಿದುಳಿದ ಅವಶೇಷಗಳನ್ನು ನಾವು ಕಾಣುತ್ತೇವೆ.

‘ಸರಸ್ವತಿ’ಯ ಸ್ತುತಿಯೊಂದಿಗೆ ಆರಂಭವಾಗುವ ‘ಕಿತಾಬೆ-ನವರಸ’ದಲ್ಲಿ ಹಲವು ಬಾರಿ ಸರಸ್ವತಿಯನ್ನು ಸ್ತುತಿಸುವುದನ್ನು ಕಾಣುತ್ತೇವೆ;

**‵ಲೇವೋ ಶುಭ ನಾಮ ಸಿರಿ ಸರಸತಿಕೊ ತಬ ಪಾಯೋ**
**ಜಸ ನವರಸ ಸರಸ ಸಂಗ**
**ಇಬ್ರಾಹಿಮ ಕರ್ಣ ಗಹತ ದಂಡವತ ಕರತ ತಬ ಹೋತ**
**ರೋಮ ರೋಮ ಭಯೋ ಉಮಂಗ**
**ಸರಸ್ವತಿ ಸ್ವಚ್ಛ ಸುಂದರೀ ಮಹಾ ಉತ್ತಮ ಜಾತ ನಿರ್ಮಲ**
**ಏಕ ಹಸ್ತ ಪುಸ್ತಕ ದೂಜೆ ಪಾಂಢರೀ ಸುಮಿರನ**

**ತೀಜೆ ಶಿಯೆ ಶಂಖ ಚೌಥ ಕರ ಉಮಂಗ'**

ಸರಸ್ವತಿಯನ್ನು ತನ್ನ ಆರಾಧ್ಯ ದೈವ ಎನ್ನುವಂತೆ ಚಿತ್ರಿಸಿದ್ದಾನೆ.

ಮತ್ತೊಂದು ಪದ್ಯದಲ್ಲಿ ಶಾರದೆ-ಗಣೇಶರನ್ನು ಮಾತಾ-ಪಿತಾ ಎಂದು ಸ್ತುತಿಸುತ್ತಾನೆ;

**`ಶರದಾ ಗಣೇಶ ಮಾತಾಪಿತಾ ತುಮ ಮಾನೋ**
**ನಿರ್ಮಲ ಬಿಂಬ ಸ್ಪಟಿಕ ತೀಸೀ ತಾಶ**
**ಇಬ್ರಾಹಿಮ ಗುಪಿತ ಗಹೀಸೂ ಅಬ ನವಾಜ ಪರಗಟ**
**ಕೀನೋ ಧನ್ನ ಮೇರೋ ರಾಸ'**

ಹಾಗೆಯೇ ಮುಂದುವರೆದು ಗಣಪತಿಯ ಬಗ್ಗೆ ಇನ್ನೊಂದು ಪದ್ಯದಲ್ಲಿ;

**`ಗಣಪತಿ ಮೂರತ ಹಸ್ತ ಮೇಘ ಮದ ಬರಖತ ಪಾನೀ**
**ದಂತ ದಾಮಿನೀ ಘಂಟ ಘೋರ ಘೋರ**
**ಗೋರಮಂಡಾನ ಬಿಧು ಬಾನೀ**
**ಸರಸ್ವತಿ ಪವಿತ್ರರ ಸ್ವಾಂತ**
**ಘನ ಜಲ ಕಸೆ ನಜೀ ಜಾನೀ**
**ಇಬ್ರಾಹಿಮ ನೌರಸ ಮುಗತಾ ನಿಕಸತ**
**ಯಾ ಕಾರಣ ನಿಹೀಚೆಂ ಮಾನೀ'**

ಗಣಪತಿಯ ಮೂರ್ತಿಯು ಹಸ್ತಾ ನಕ್ಷತ್ರದಂತೆ ಹೊಳೆಯುತ್ತದೆ. ಹಸ್ತಾ ನಕ್ಷತ್ರದಲ್ಲಿ ಹೇಗೆ ವರ್ಷಧಾರೆಯಾಗುತ್ತದೆಯೋ ಹಾಗೆಯೇ ಆತನ ಹಣೆಯಿಂದ 'ಮದ'(ಸಂತೋಷ) ಹೊರ ಬೀಳುತ್ತದೆ. ಆತನ ದಂತಗಳು ಮಿಂಚಿನಂತೆ ಇವೆ, ಮೋಡಗಳಂತೆ ಗಂಟೆಯನಾದವಾಗುತ್ತದೆ, ಕಾಮನಬಿಲ್ಲಿನ ಹಾಗೆ ಆತನ ಹಣೆ ಕಾಣಿಸುತ್ತದೆ. ಆತನ ವಾಣಿ ಅಮೃತದ ಸಮಾನವಾಗಿದೆ ಎಂದು ಹೇಳುವನು. ಹಾಗೆಯೇ ಸರಸ್ವತಿಯ ಕುರಿತು- ಪವಿತ್ರ ಸ್ವಾತಿ ನಕ್ಷತ್ರದ ಮೋಡಗಳಂತೆ, ಸ್ವಾತಿ ನೀರಿನ ಮಳೆಯಂತೆ ಕಾಣುವುದು. ತಾನು ಸರಸ್ವತಿ ಕೃಪೆಯಿಂದ 'ನವರಸ' ಎಂಬ ಗೀತೆಯನ್ನು ಬರೆದಿದ್ದೇನೆ ಎಂದು ಗಣಪತಿ ಮತ್ತು ಸರಸ್ವತಿಯರ ಬಗ್ಗೆ ಸ್ಮರಿಸುವನು.

ಮತ್ತೊಂದು ಗೀತೆಯಲ್ಲಿ ಸರಸ್ವತಿ ಮತ್ತು ಗಣಪತಿಯರನ್ನು ತನ್ನ ತಾಯಿ-ತಂದೆಯರೆಂದು, ಅವರಿಂದ ತಾನು ಭಾಗ್ಯವನ್ನು ಪಡೆದೆನೆಂದು ಹೇಳಿರುವನು;

**`ವಿದ್ಯಾ ಪಂಥ ಸೂಜತ ನಹೀ ಯಾ ಕಾರಣ ಸುರಸತೀ**
**ಗಣಪತಿ ರಬಿಸಸಿ ಭಯೆ ಪರಗಾಸಾ,**
**ವಾಕ ವಿನಾಯಕ ಜುಗಲ ತುಂಬರ ಬೀನ**
**ಭೂಲೇ ರೀ ದುಖ ಧರನ ಕೊ ಸುಖ ಕರನ ಭೋಗ ವಿಲಾಸ**
**ಶಾರದಾ ಗಣೇಸ ಮಾತಾ ಪೀತ ತುಮ ಮಾನೋ**
**ನಿರಮಲ ಬೇಬ ಘಟಿಕ ಸೀಸೆ ತಾಸ**

**ಇಬ್ರಾಹಿಮ ಗುಪಿತ ಪೀಸೋ ಅಪ ನವಾಜ**
**ಪರಗಟ ಕೀನೋ ಧನಿ ಮೇರೋ ರಾಸ'**

ವಿದ್ಯೆಯ ಮಾರ್ಗ ಸುಲಭವಾಗಿ ದೊರಕಿಸಿ ಕೊಡಲು ಸರಸ್ವತಿ–ಗಣಪತಿಯರು ಸೂರ್ಯಚಂದ್ರರಂತೆ ಅವತರಿಸಿದ್ದಾರೆ. ಇವರಿಬ್ಬರೂ ತಂಬೂರಿಯ ಎರಡು ತಂತಿಗಳಿದ್ದಂತೆ, ದುಃಖಿತರಾದ ಜನರಿಗೆ ಸುಖಿಗಳನ್ನಾಗಿ ಮಾಡಲು ಹಾಗೂ ಅವರಿಗೆ ಭೋಗ–ವಿಲಾಸದ ಜೀವನ ಕರುಣಿಸಲು ಈ ಇಬ್ಬರು ಅವತರಿಸಿದ್ದಾರೆ. ಶಾರದೆ–ಗಣೇಶರಿಬ್ಬರು ನನ್ನ ತಾಯಿ–ತಂದೆಯರು. ನೀವು ಕೃಪೆ ಮಾಡಿ ಪ್ರಖ್ಯಾತನನ್ನಾಗಿ ಮಾಡಿದ್ದಿರಿ, ನನ್ನ ಭಾಗ್ಯ ಧನ್ಯವಾಯಿತು ಎಂದು ಹೇಳಿಕೊಳ್ಳುವನು.

ಇನ್ನೊಂದು ಕಡೆ ಸರಸ್ವತಿ ಮತ್ತು ಗಣಪತಿಯರನ್ನು ಪ್ರತ್ಯೇಕವಾಗಿ ಸ್ತುತಿಸುವನು;

**`ಸರಸ್ವತಿ ಗೋರೀ ಜೈಸೆ ಗಜದಂತೆ ಪೋತರೀ**
**ಕೋ ಕಸ ಸುತಾರೆ ಸಂವಾರೆ ಬನಾ**
**ಯಾಕಾರಣ ಗಣಪತಿ ದೀನೋಂ ಮಾನ**
**ಮಾತಂಗ ಮುಖ ಸೋ ರೂಪ ಕೀನೋ ಅಪನಾ'**

ಗೌರವ ವರ್ಣದ ಸರಸ್ವತಿ ಗಜದ ದಂತದಿಂದ ಮಾಡಿದ ಪುತ್ಥಳಿಯಂತೆ ಇದ್ದಾಳೆ. ಅವಳನ್ನು ಕಡೆದವನು ಯಾವನೋ? ಹಾಗೆಯೇ ಗಣಪತಿಯು ಆನೆಗೆ ಮರ್ಯಾದೆ ಕೊಟ್ಟು ಅದರ ಮುಖವನ್ನೇ ತನ್ನ ಮುಖವನ್ನಾಗಿ ಮಾಡಿಕೊಂಡಿದ್ದಾನೆ.

**`ಗಣಪತಿ ತುಮ ರೂಪಕೀ ತನಕ**
**ಜೋತ ಮಾನೋ ಸೂರ ಜಗಮಗೆ ಋತು ಬಸಂತ**
**ಸುದಿಷ್ಟ ಸಾದಿಷ್ಟ ಭವಿ ವಿನಾಯಕ ಮನೋಹರ**
**ಸನ್ಮುಖ ದೇಖನ ಕಠಿನ ಸಾವನ ನೈನ ಪಂಥ**
**ಚಿಂತಾ ಭಾಈ ಚಂದರಮುಖ ಕಲಂಕ**
**ಅಸ್ತುತೀ ತೇರೀ ಸುನೇ ಕಂಥ**
**ಇಬ್ರಾಹಿಮ ಆಖೆಂ ನೌರಸ ಗನೇಶ ಪದ**
**ಗಾವತ ಚೋಂಪ ಸೇವಕ ಕಲಾವಂತ'**

ಗಣಪತಿಯ ಮುಖದ ತೇಜವೂ ಕೂಡಾ ವಸಂತ ಋತುವಿನ ಸೂರ್ಯನಷ್ಟು ಪ್ರಕಾಶಮಾನವಾಗಿದೆ. ಆತನ ದೃಷ್ಟಿ ದಯೆಯಿಂದ ಕೂಡಿದೆ. ಆತನ ಇನ್ನೊಂದು ಹೆಸರು ವಿನಾಯಕ. ಇಬ್ರಾಹಿಮನು ಗಣೇಶನ ಸ್ತುತಿಯಲ್ಲಿಯೇ ನವರಸವನ್ನು ಬರೆಯುತ್ತಿದ್ದಾನೆ. ಅವುಗಳನ್ನು ಕಲಾವಿದರು ತುಂಬಾ ಉತ್ಸಾಹದಿಂದ ಹಾಡುತ್ತಾರೆ ಎಂದು ಹೇಳುವನು.

ಹಾಗೆಯೇ ಮುಂದುವರೆದು ಇಬ್ರಾಹಿಮನು ಗೌರಿ, ಈಶ್ವರರನ್ನು ಸ್ತುತಿಸುವನು;

**`ಬೈರವ ಕರ್ಪೂರಗಾರ ಭಾಲತಿಲಕ ಚಂದ್ರಾ**

**ತ್ರಿನೇತ್ರ ಜಟಾ ಮುಕುಟ ಗಂಗಾಧರ ಜೈನ**
**ಇಕಹಸ್ತ ರೂಂಡ ನರಾ ತಿರಸೂಲ ಜುಗಲಾ ಕರಾ**
**ವಾಹನ ಬಲಿವರ್ದ ಸೀತ ಜಾತ ಗುಸಾಯೆಂ ಈಶ್ವರಾ**
**ಕಾಸ ಕುರೂತ ಕುಂಜರ ಪರಪರ ಚರಮ ವಯಾ ಗರಾ ಆಭೋಗ**
**ಸರಪ ಸಿಂಗಾರ ಟಿಪ್ಯನ ಪರಭಾಯೆಂ ಕಲಪತರಾ**
**ರಮಣಿ ವಾದನ ಮರ್ದಂಗ ಧಾಮ ಕೈಲಾಸ ತದವಪರಾ**
**ಇಬ್ರಾಹಿಮ ಉಕ್ಕಹತ ಲಚ್ಚನ ರಾಗ ಭೈರವ ಮಹಾಉತ್ತಿಮ ಸುಂದರಾ'**

ಈ ಪದ್ಯದಲ್ಲಿ ಬಾದಶಹನಿಗೆ ಶಿವನ ಬಗ್ಗೆ ಮತ್ತು ಆತನ ಮೂರ್ತಿಯ ಬಗ್ಗೆ ಸ್ಪಷ್ಟವಾದ ಕಲ್ಪನೆ ಇದೆ. ಶಿವನ ಮೂರು ಕಣ್ಣುಗಳು, ಜಡೆ, ತ್ರಿಶೂಲ, ವಾಹನ, ಕೈಯಲ್ಲಿರುವ ಮೃದಂಗ ಮತ್ತು ವಾಸಸ್ಥಾನ ಕೈಲಾಸದ ಬಗ್ಗೆ ಹೇಳುವನು.

ಧಾರ್ಮಿಕ ಸಹಿಷ್ಣುತೆ ಮೆರೆದ ಎರಡನೆಯ ಇಬ್ರಾಹಿಮ ಬಾದಶಹನಿಗೆ 'ಜಗದ್ಗುರು' ಎಂಬ ಬಿರುದು ಇತ್ತು. ಅಬ್ದುಲ್ಲಾ ದೇಹಲವಿ ಕವಿ ಬರೆದ 'ಇಬ್ರಾಹಿಮ ನಾಮಾ' ಕಾವ್ಯದಲ್ಲಿ ಹಲವಾರು ಬಾರಿ 'ಜಗದ್ಗುರು' ಎಂದು ಉಲ್ಲೇಖಿಸಲಾಗಿದೆ;

**`ದಖಿನ ದೇಸಮೆ ಶಹ ಜಗತ್‌ಗುರು ಹೈ ನಾವು**
**ವಿದ್ಯಾಪುರ ನಗರ ಉಸ ರಹನ ಹೈ ಜೋ ಠಾವೂ'**

ಮಹಮ್ಮದಿಯ ಆಳರಸರೆಲ್ಲರೂ ಕ್ರೂರಿಗಳು, ಯುದ್ಧದಾಹಿಗಳು, ಪರಧರ್ಮದ ಮೇಲೆ ಆಕ್ರಮಣವೆಸಗಿದವರು ಎಂಬ ಧಾರ್ಮಿಕ ಆಧಾರಿತ ಪೂರ್ವಭಾವನೆ ರೂಪಿಸುವ ತೆರದಲ್ಲಿ ಲೇಖನ, ಕಥೆ, ಕಾದಂಬರಿ, ಕಾಲಿಕ ಸಂಗತಿಗಳನ್ನು ಇತಿಹಾಸಕ್ಕೆ ಪೋಣಿಸಿ ಹೇಳುವದನ್ನು ನಾವು ಇತ್ತೀಚಿಗೆ ಪದೇ ಪದೇ ಕಾಣುತ್ತಿರುತ್ತೇವೆ. ಇದನ್ನೇ ಅಗ್ಗದ ಪ್ರಚಾರ ಮತ್ತು ಸಮಾಜದ ಧ್ರುವೀಕರಣಕ್ಕಾಗಿ ಹರಿಬಿಡಲಾಗುತ್ತಿರುವ ಪ್ರಸಕ್ತತೆಗೆ ಇತಿಹಾಸದ ಕೆಲ ವೈಜ್ಞಾನಿಕ ಮತ್ತು ಸಂಶೋಧನಾತ್ಮಕ ಆಧಾರವಲ್ಲದ ಸಂಗತಿಗಳಿಗೆ ನಮ್ಮ ಮನಸ್ಸನ್ನು ಸೆಳೆಯುವಂತೆ ಮಾಡಿದೆ. ಈ ರೀತಿಯಾದ ಸಂಗತಿಗಳನ್ನು ವಿವಿಧ ಸಮೂಹ ಮಾಧ್ಯಮಗಳಲ್ಲಿ(ಸಾಮಾಜಿಕ ಮಾಧ್ಯಮಗಳಾದ ವಾಟ್ಸಾಪ್, ಫೇಸ್‌ಬುಕ್‌ಗಳನ್ನು ಒಳಗೊಂಡು) ಶಾಂತಿ ಕದಡುವಂತೆ ಬಿತ್ತರಿಸಲಾಗುತ್ತಿದೆ. ಇತಿಹಾಸದಲ್ಲಿ ಘಟಿತ ತಪ್ಪುಗಳಿಂದ ಮಾನವ ಕಲಿತು, ನಮ್ಮ ಸಮಾಜವನ್ನು ಉನ್ನತಿಯೆಡೆಗೆ ತೆಗೆದುಕೊಂಡು ಹೋಗುವ ಸರಿಯಾದ ಪಾಠಗಳನ್ನು ಮಾತ್ರವೇ ನಾವು ಕಲಿಯಬೇಕಿದೆ. ಇತಿಹಾಸದ ಗಾಯಗಳನ್ನು ಪುನರ್‌ಸ್ಥಾಪಿಸಿ ರೋಗ ಉಲ್ಬಣಮಾಡುವ ಅಂಶಗಳನ್ನು ಪಕ್ಕಕ್ಕೆ ಸರಿಸಬೇಕಿದೆ. ಆಗ ಮಾತ್ರವೇ ನಾವು ವಾಸಿಸುವ ಸಮಾಜ ಆರೋಗ್ಯಪೂರ್ಣವಾಗಲು ಹಾಗೂ ಶಾಂತಿ, ಸಮೃದ್ಧಿಯಿಂದ ಎಲ್ಲರೂ ಒಟ್ಟಾಗಿ ಬದುಕಲು ಸಾಧ್ಯವಲ್ಲವೇ?

**ಪರಾಮರ್ಶನ ಗ್ರಂಥಗಳು:**


1. ಕೃಷ್ಣ ಕೊಲ್ಹಾರ ಕುಲಕರ್ಣಿ, (2001), ವಿಸ್ಮಯ! ಇದು ವಿಜಾಪುರ, ವಿಜಯಪುರ ಜಿಲ್ಲಾ ಆಡಳಿತ, ವಿಜಯಪುರ.
2. ಕೃಷ್ಣ ಕೊಲ್ಹಾರ ಕುಲಕರ್ಣಿ, (2002), ಬಿಜಾಪುರ ಆದಿಲಶಾಹಿ, ಸಿಕ್ಕಾಬ, ಆದಿಲಶಾಹಿ ಅಧ್ಯಯನ ಸಂಸ್ಥೆ, ಬಿಜಾಪುರ.
3. ಕೃಷ್ಣ ಕೋಲಾರ ಕುಲಕರ್ಣಿ(ಅನುವಾದಕರು), (2016), ಕರ್ನಾಟಕದಲ್ಲಿಯ ಅರೇಬಿಕ್, 'ಕಿತಾಬ–ಇ–ನವರಸ' ಆದಿಲ್‌ಶಾಹಿ ಸಾಹಿತ್ಯ ಸಂಪುಟ–13, ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ.
4. ಚಂದ್ರಕಾಂತ ಪೋಕಳೆ (ಅನುವಾದಕರು), (2016), ಫರ್ಮಾನುಗಳು/ಸನದುಗಳು/ಕೈಫಿಯತ್ತುಗಳು, ಆದಿಲ್‌ಶಾಹಿ ಸಾಹಿತ್ಯ ಸಂಪುಟ–15, ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.